**ಮಕ್ಕಳ ನೇತ್ರ ಸಮಸ್ಯೆಗಳು ದೊಡ್ಡವರಿಗಿಂತ ಭಿನ್ನ. ಶೇ 24ರಷ್ಟು ಮಕ್ಕಳು ಮೆಳ್ಳೆಗಣ್ಣು ಅಥವಾ ಮಾಲುಗಣ್ಣಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ.**


ಚಿತ್ರ: ವಿಶ್ವನಾಥ ಸುವರ್ಣ

3–ಡಿ ಚಿತ್ರಗಳನ್ನು ಗ್ರಹಿಸಲು ಮಿದುಳಿಗೆ ವಿಶೇಷ ಸಾಮರ್ಥ್ಯ ಬೇಕು. ಏಕೆಂದರೆ, ಎರಡು ಭಿನ್ನ ದೃಶ್ಯಗಳು ಅದರಲ್ಲಿದ್ದು, ಎರಡನ್ನೂ ಒಂದಾಗಿ ಗ್ರಹಿಸಬೇಕಾಗುತ್ತದೆ. ಏಕಕಾಲಕ್ಕೆ ಎರಡು ಭಿನ್ನ ದೃಶ್ಯಗಳು ರವಾನೆಯಾದಾಗ ಅವುಗಳನ್ನು ಒಂದಾಗಿ ಗ್ರಹಿಸಲು ಸಾಧ್ಯವಾಗದೆ ಮಿದುಳು ಒದ್ದಾಡುತ್ತದೆ. ಇದರಿಂದ ಗ್ರಹಿಕೆಯ ಶಕ್ತಿ ಕುಂಠಿತವಾಗಿ ಮಕ್ಕಳಿಗೆ ದೃಷ್ಟಿದೋಷಗಳು ಕಾಣಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ ಎಂದು ವರದಿಯಲ್ಲಿ ವಿವರಿಸಲಾಗಿದೆ. 3–ಡಿ ಚಿತ್ರಗಳನ್ನು ವೀಕ್ಷಿಸಿದ 15 ವರ್ಷದೊಳಗಿನ ಮಕ್ಕಳ ಆರೋಗ್ಯ ಸ್ಥಿತಿಯ ಕುರಿತು ಅಧ್ಯಯನ ನಡೆಸಿ ಈ ವರದಿ ಸಿದ್ಧಪಡಿಸಲಾಗಿದೆ.

ಸ್ಮಾರ್ಟ್ ಫೋನ್‌ಗಳು ಸಹ 3–ಡಿ ಸೌಲಭ್ಯವನ್ನು ಪಡೆಯುತ್ತಿರುವ ಸುದ್ದಿ ದಟ್ಟವಾಗಿರುವ ಈ ಸನ್ನಿವೇಶದಲ್ಲಿ ಮಕ್ಕಳ ಕಣ್ಣುಗಳು ಮತ್ತಷ್ಟು ಗಂಡಾಂತರ ಎದುರಿಸಲಿವೆ. ಆ್ಯಪಲ್ ಕಂಪೆನಿ ತನ್ನ ಮುಂದಿನ ಸ್ಮಾರ್ಟ್ ಫೋನ್ ಸರಣಿಯಲ್ಲಿ ಗ್ಲಾಸ್ ಮುಕ್ತ 3–ಡಿ ಸ್ಕ್ರೀನ್ ನೀಡಲಿದೆ ಎಂಬ ಸುದ್ದಿ ದಟ್ಟವಾಗಿದೆ. ಈಗಾಗಲೇ ಸ್ಮಾರ್ಟ್ ಫೋನ್ ಬಳಕೆಯ ಗೀಳು ಅಂಟಿಸಿಕೊಂಡಿರುವ ಮಕ್ಕಳಿಗೆ 3–ಡಿ ಸ್ಕ್ರೀನ್ ಪರದೆಯಿರುವ ಐ–ಫೋನ್ ಸಿಕ್ಕುಬಿಟ್ಟರೆ?

### ಕಾಡುವ ಅಂಧತ್ವ

ಎಷ್ಟೆಲ್ಲ ಚಿಕಿತ್ಸಾ ಸೌಲಭ್ಯಗಳು ಲಭ್ಯವಾಗಿದ್ದರೂ ಮಕ್ಕಳ ಅಂಧತ್ವದ ಸಮಸ್ಯೆ ಗ್ರಾಮಾಂತರ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲೇ ಕಾಡುತ್ತಿದೆ. ಸಾಮಾಜಿಕ ಹಾಗೂ ಆರ್ಥಿಕ ಸನ್ನಿವೇಶಗಳು ಈ ಸಮಸ್ಯೆಯನ್ನು ಜೀವಂತವಾಗಿಟ್ಟಿವೆ. ತೀರಾ ಹಿಂದುಳಿದ ಪ್ರದೇಶಗಳಲ್ಲಿ ಅಪೌಷ್ಟಿಕತೆ ಮಕ್ಕಳ ಬಾಲ್ಯವನ್ನೇ ತಿನ್ನುತ್ತಿದೆ. ಸರ್ಕಾರದ ಯೋಜನೆಗಳು ಬಾಧಿತರನ್ನು ಇನ್ನೂ ತಳಮಟ್ಟದವರೆಗೆ ತಲುಪಿಲ್ಲ. ಗ್ರಾಮಾಂತರ ಭಾಗದಲ್ಲಿ ಈಗಲೂ ಕಣ್ಣಿನ ಆಸ್ಪತ್ರೆಗಳು ಇಲ್ಲ. ಜಿಲ್ಲಾ ಕೇಂದ್ರಗಳ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆಯುವಷ್ಟು ಸಾಮರ್ಥ್ಯ ಪಾಲಕರಲ್ಲೂ ಇಲ್ಲ. ಹೀಗಾಗಿ ರೂಢಿಗತ ಸಾಂಪ್ರದಾಯಿಕ ವಿಧಾನಗಳಿಗೆ ಅವರು ಮೊರೆ ಹೋಗುವುದರಿಂದ ಸಮಸ್ಯೆ ಹಾಗೇ ಉಳಿದುಕೊಂಡಿದೆ. ಇದರಿಂದ ಸಮಾಜದ ಮುಖ್ಯ ವಾಹಿನಿಯಲ್ಲಿ ಒಂದಾಗಲು ಅವರಿಂದ ಇದುವರೆಗೆ ಸಾಧ್ಯವಾಗಿಲ್ಲ.

ಮಕ್ಕಳಲ್ಲಿ ಅಂಧತ್ವ ಸಮಸ್ಯೆ ಕೂಡ ದೊಡ್ಡ ಪ್ರಮಾಣದಲ್ಲಿಯೇ ಇದೆ. ಆದರೆ, ದೇಶದಲ್ಲಿ ನಿತ್ಯ ಲಕ್ಷಾಂತರ ಮಂದಿ ಕಣ್ಮುಚ್ಚಿದರೂ ಎಳೆಯ ಕಂದಮ್ಮಗಳಲ್ಲಿ ಹೊಸ ಬೆಳಕು ಮೂಡಿಸಲು ಬೇಕಾದಷ್ಟು ಕಾರ್ನಿಯಾಗಳು ದಾನವಾಗಿ ಸಿಗುತ್ತಿಲ್ಲ. ಪ್ರತಿಯೊಂದು ಕಣ್ಣಿನ ಬ್ಯಾಂಕನಲ್ಲೂ ಕಾರ್ನಿಯಾ ಆಕಾಂಕ್ಷಿಗಳ ಬಹುದೊಡ್ಡ ಪಟ್ಟಿಯೇ ಇದೆ. ನೇತ್ರದಾನದ ಕುರಿತು ಇತ್ತೀಚಿನ ದಿನಗಳಲ್ಲಿ ದೊಡ್ಡ ಪ್ರಮಾಣದ ಜಾಗೃತಿ ಮೂಡಿಸಲಾಗಿದ್ದರೂ ದಾನಿಗಳ ಸಂಖ್ಯೆ ಮಾತ್ರ ನಿರೀಕ್ಷಿತ ಪ್ರಮಾಣದಲ್ಲಿ ಹೆಚ್ಚಾಗಿಲ್ಲ. ಮಕ್ಕಳ ದೃಷ್ಟಿಭಾಗ್ಯ ಕಾಪಾಡುವಂತಹ, ಸತ್ತ ಸಂಬಂಧಿಗಳ ನೇತ್ರದಾನ ಮಾಡುವಂತಹ ಜಾಗೃತಿ ವ್ಯಾಪಕವಾಗಿ ಅರಿವಿನ ಹಣತೆಗಳು ಬೆಳಗಬೇಕಿದೆ. ಹೊಸ ಪೀಳಿಗೆಯ ಭವಿಷ್ಯವನ್ನು ಉಜ್ವಲಗೊಳಿಸಬೇಕಿದೆ. ■



ಶ್ರೀ ಪಂಚಮುಖಿ ಜ್ಯೋತಿಷ್ಯಂ
ॐ ✝ ☪ INDIA'S MOST POPULAR ASTROLOGER ॐ ✝ ☪
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ

ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಶಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450